# INTEGRATED RESEARCH JOURNAL OF MANAGEMENT, SCIENCE AND INNOVATION

IRJMSI

**ISSN 2582-5445**

*An Internationally Indexed Peer Reviewed & Refereed Journal*

www.IRJMSI.com
www.isarasolutions.com

Published by iSaRa Solutions

# Kannada In Technical Education To Support Language Development

# ಭಾಷಾ ಬೆಳವಣಿಗೆಗೆ ಪೂರಕವಾಗಿ ತಾಂತ್ರಿಕ ಶಿಕ್ಷಣದಲ್ಲಿ ಕನ್ನಡ

**Dr. Praveena Padyana**
Assistant Professor and Head (in -charge)
Department of Kannada
Central University of Kerala periya ,
kasaragod 671 325
**ಡಾ. ಪ್ರವೀಣ ಪದ್ಯಾಣ**
**ಸಹಾಯಕ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು (ಪ್ರಭಾರ),**
**ಕನ್ನಡ ವಿಭಾಗ,**
**ಕೇರಳ ಕೇಂದ್ರೀಯ ವಿಶ್ವವಿದ್ಯಾಲಯ, ಪೆರಿಯ,**

Significant technological progress is being made cross all sectors today. The Kannada language also needs to see technological development at a matching pace. To support this, there is a need for the effective use of the Kannada language and literature in technical education Kannada curricula have been introduced in technical education in Karnataka; this essay has been prepared with a focus on these texts and the teaching of technical subjects in Kannada To reduce the indispensability of the English language in the Kannada-speaking region, the information and wealth of knowledge currently available only in English—but not in Kannada—must be made accessible in Kannada as well. In other words, Kannada needs to be developed with a focus on its effective usage. In this regard, the introduction of Kannada in technical education marks a significant step forward.

**ಕಾಸರಗೋಡು.**

ಮನುಷ್ಯ ತನ್ನ ಮಾತು ಮತ್ತು ಬುದ್ಧಿಯ ಬಲದಿಂದ ಇತರ ಪ್ರಾಣಿಪಕ್ಷಿಗಳಿಂದ ಭಿನ್ನವಾಗಿ ಬದುಕುತ್ತಿದ್ದಾನೆ. ಆ ಮೂಲಕ ಇಡೀ ಜೀವಜಗತ್ತಿನ ಮೇಲೆ ತನ್ನ ಪ್ರಭಾವ, ಹಿಡಿತವನ್ನು ಸಾಧಿಸಿದ್ದಾನೆ. ಸಂಘಜೀವಿಯಾದ ಮನುಷ್ಯನನ್ನು ಇತರ ಜೀವಿಗಳಿಂದ ಪ್ರತ್ಯೇಕಿಸುವಲ್ಲಿ ಭಾಷೆ ಪ್ರಮುಖ ಸಾಧನವಾಗಿದೆ.

'ಭಾಷೆ' ಎಂಬ ಪದವು ಸಂಸ್ಕೃತದ 'ಭಾಷ್' ಎಂಬ ಧಾತುವಿನಿಂದ ಬಂದಿದ್ದು, ಭಾಷೆಯೆಂದರೆ ಉಚ್ಚರಿಸುವುದು, ಮಾತನಾಡುವುದು ಎಂದರ್ಥ. ಭಾಷೆಯ ಮೂಲಕ ಮನುಷ್ಯ ತನ್ನ ಆಲೋಚನೆಗಳನ್ನು ಅಭಿವ್ಯಕ್ತಿಸುತ್ತಾನೆ; ಸಂವಹನವನ್ನು ಸಾಧಿಸುತ್ತಾನೆ.

ಕರ್ನಾಟಕದಲ್ಲಿ ಕನ್ನಡ ಭಾಷೆಯು ಬಹುಜನರ ಮಾತೃಭಾಷೆಯಾಗಿದೆ. ಸಾಮಾಜಿಕವಾಗಿ ಹೆಚ್ಚು ಬಳಕೆಯಲ್ಲಿರುವ ಭಾಷೆಯೂ ಹೌದು. ಸಾವಿರಾರು ವರ್ಷಗಳ ಇತಿಹಾಸ, ಸಮೃದ್ಧ ಸಾಹಿತ್ಯವಿರುವ ಈ ಭಾಷೆಗೆ ಶಾಸ್ತ್ರೀಯ ಭಾಷೆಯ ಮನ್ನಣೆಯೂ ಇದೆ. ಇದು ಕರ್ನಾಟಕದ ಆಡಳಿತ ಭಾಷೆಯೂ ಹೌದು.

ಕನ್ನಡ ಭಾಷೆಯನ್ನು ಉಳಿಸಿ, ಬೆಳೆಸಬೇಕಾದರೆ, ಕನ್ನಡ ಭಾಷಾ ಶ್ರೀಮಂತಿಕೆಯನ್ನು, ಸೌಂದರ್ಯವನ್ನು ಎಲ್ಲರೂ ಆಸ್ವಾದಿಸುವಂತಾಗಬೇಕಾದರೆ ಕನ್ನಡ ಭಾಷೆಯನ್ನು ಹೆಚ್ಚು ಹೆಚ್ಚು ಬಳಸುವಂತಾಗಬೇಕು. ಆದರೆ ಇಂದು ಆಂಗ್ಲ ಮಾಧ್ಯಮದ ಭರಾಟೆ, ಬಹುಜನರ ವ್ಯಾಮೋಹದಿಂದಾಗಿ ಕನ್ನಡದ ಅವಗಣನೆಯಾಗುತ್ತಿದೆ. ಸತ್ವ ಹಾಗೂ ಸತ್ಯದ ದೃಷ್ಟಿಯಿಂದ ಪ್ರತಿಯೊಂದು ಭಾಷೆಯೂ ಶ್ರೀಮಂತವಾದುದು.

ಇಂದು ಎಲ್ಲ ಕ್ಷೇತ್ರಗಳಲ್ಲಿ ತಂತ್ರಜ್ಞಾನದಲ್ಲಿ ಗಣನೀಯವಾಗಿ ಪ್ರಗತಿ ಸಾಧಿಸಲಾಗುತ್ತಿದೆ. ಅದೇ ವೇಗದಲ್ಲಿ ಕನ್ನಡ ಭಾಷೆಯಲ್ಲೂ ತಾಂತ್ರಿಕತೆಯ ಅಭಿವೃದ್ಧಿಯಾಗಬೇಕಿದೆ. ಇದಕ್ಕೆ ಪೂರಕವಾಗಿ ತಾಂತ್ರಿಕ ಶಿಕ್ಷಣದಲ್ಲಿ ಕನ್ನಡ ಭಾಷೆ, ಸಾಹಿತ್ಯದ ಪರಿಣಾಮಕಾರಿ ಬಳಕೆ ಆಗಬೇಕಿದೆ. ಕನ್ನಡ ಭಾಷೆಯಲ್ಲಿ ತಾಂತ್ರಿಕ ಅಭಿವೃದ್ಧಿ ಸಾಧಿಸಬೇಕಾದರೆ ತಾಂತ್ರಿಕ ಶಿಕ್ಷಣದಲ್ಲೂ ಪರಿಣಾಮಕಾರಿಯಾದ ಕನ್ನಡದ ಕಲಿಕೆ ಮತ್ತು ಬಳಕೆ ಅಗತ್ಯ. ಕರ್ನಾಟಕದಲ್ಲಿ ತಾಂತ್ರಿಕ ಶಿಕ್ಷಣದಲ್ಲಿ ಕನ್ನಡ ಪಠ್ಯವನ್ನು ಅಳವಡಿಸಲಾಗಿದ್ದು, ಆ ಪಠ್ಯಗಳನ್ನು ಹಾಗೂ ಪ್ರಧಾನವಾಗಿರಿಸಿಕೊಂಡು ತಾಂತ್ರಿಕ ಶಿಕ್ಷಣದಲ್ಲಿ ಕನ್ನಡ ಬೋಧನೆಯನ್ನು ಗಮನದಲ್ಲಿರಿಸಿಕೊಂಡು ಈ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಕನ್ನಡ ಭಾಷೆಯ ಬೆಳವಣಿಗೆಗಾಗಿ ವೃತ್ತಿ ಶಿಕ್ಷಣದಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಎಲ್ಲರೂ ಕಲಿಯಬೇಕೆಂಬ ಚಿಂತನೆ ಬೆಳೆದು ಬಂತು. ಇದರ ಪರಿಣಾಮವಾಗಿ ಮಾನ್ಯ ಕರ್ನಾಟಕ ಘನ ಸರಕಾರವು ಡಾ. ಹಿ.ಚಿ. ಬೋರಲಿಂಗಯ್ಯ ಅವರ ಅಧ್ಯಕ್ಷತೆಯಲ್ಲಿನ ಸಮಿತಿಯು ನೀಡಿದ ವರದಿ ಅನ್ವಯ ಹಾಗೂ ಮಾನ್ಯ ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅವರ ಅಧ್ಯಕ್ಷತೆಯಲ್ಲಿ ದಿನಾಂಕ 29–07–2017 ರ ಸಭೆಯ ನಿರ್ಣಯದಂತೆ ಕರ್ನಾಟಕ ರಾಜ್ಯದ ಎಲ್ಲಾ ಸರ್ಕಾರಿ, ಖಾಸಗಿ, ಡೀಮ್ಡ್ ವಿಶ್ವವಿದ್ಯಾನಿಲಯಗಳಲ್ಲಿ ತಾಂತ್ರಿಕ ಶಿಕ್ಷಣ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕನ್ನಡ ಮತ್ತು ಕನ್ನಡೇತರ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಬೊಧಿಸಲು ಅನುಕೂಲವಾಗುವತೆ ಪ್ರತ್ಯೇಕ ಪಠ್ಯಕ್ರಮವನ್ನು ಸಿದ್ಧಪಡಿಸಲಾಗಿದೆ. ತಾಂತ್ರಿಕ ಶಿಕ್ಷಣದಲ್ಲಿ ಕನ್ನಡದ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆ, ಸಾಹಿತ್ಯವನ್ನು ಕಲಿಯಲು 'ಆಡಳಿತ ಕನ್ನಡ' ಎಂಬ ಪಠ್ಯವನ್ನು ಸಿದ್ಧಪಡಿಸಲಾಗಿದ್ದು, 2020ರಲ್ಲಿ ಪರಿಷ್ಕರಿಸಿ 'ಸಾಂಸ್ಕೃತಿಕ ಕನ್ನಡ' ಪಠ್ಯವನ್ನು ಸಿದ್ಧಪಡಿಸಲಾಗಿದೆ. ಅಂತೆಯೇ ಕನ್ನಡೇತರ ವಿದ್ಯಾರ್ಥಿಗಳಿಗೆ ಸರಳ, ವ್ಯಾವಹಾರಿಕ ಕನ್ನಡವನ್ನು ಕಲಿಸುವ ದೃಷ್ಟಿಯಿಂದ 'ವ್ಯಾವಹಾರಿಕ ಕನ್ನಡ' ಎಂಬ ಪಠ್ಯವನ್ನು ಸಿದ್ಧಪಡಿಸಲಾಗಿದ್ದು; 2020 ರಲ್ಲಿ ಪರಿಷ್ಕೃತ ಪಠ್ಯ 'ಬಳಕೆ ಕನ್ನಡ'ವನ್ನು ಸಿದ್ಧಪಡಿಸಲಾಗಿದೆ. ಪ್ರಸ್ತುತ ಕರ್ನಾಟಕದ ತಾಂತ್ರಿಕ ಶಿಕ್ಷಣ ಕಾಲೇಜುಗಳಲ್ಲಿ ಕನ್ನಡವನ್ನು ಎಲ್ಲಾ ವಿದ್ಯಾರ್ಥಿಗಳಿಗೂ ಬೋಧಿಸಲಾಗುತ್ತಿದೆ.

ಕನ್ನಡ ನಾಡಿನಲ್ಲಿ ಇಂಗ್ಲಿಷ್ ಭಾಷೆಯ ಅನಿವಾರ್ಯತೆಯನ್ನು ಕಡಿಮೆ ಮಾಡಬೇಕಾದರೆ, ನಮಗೆ ಇಂಗ್ಲಿಷ್‌ನಲ್ಲಿ ಸಿಗುವ, ಆದರೆ ಕನ್ನಡದಲ್ಲಿ ಸಿಗದಿರುವ ಮಾಹಿತಿ, ಜ್ಞಾನಧಾರೆಗಳು ಕನ್ನಡದಲ್ಲೂ ದೊರಕುವಂತಾಗಬೇಕು. ಅಂದರೆ ಕನ್ನಡದ ಪರಿಣಾಮಕಾರಿ ಬಳಕೆಯ ದೃಷ್ಟಿಯಿಂದ ಕನ್ನಡದ ಅಭಿವೃದ್ಧಿಯಾಗಬೇಕು. ಈ ನಿಟ್ಟಿನಲ್ಲಿ ತಾಂತ್ರಿಕ ಶಿಕ್ಷಣದಲ್ಲಿ ಕನ್ನಡದ ಕಲಿಕೆ ಒಂದು ಮಹತ್ವದ ಹೆಜ್ಜೆಯಾಗಿದೆ.

ತಾಂತ್ರಿಕ ಶಿಕ್ಷಣದಲ್ಲಿ ಕನ್ನಡವನ್ನು ಬೋಧಿಸುವುದರಿಂದ ಆಗುವ ಪ್ರಯೋಜನಗಳು

1. ತಾಂತ್ರಿಕ ಶಿಕ್ಷಣದ ವಿದ್ಯಾರ್ಥಿಗಳಲ್ಲಿ ಕನ್ನಡ ಭಾಷೆ– ಸಾಹಿತ್ಯದ ಬಗೆಗೆ ಒಲವು ಮೂಡುತ್ತದೆ. ಇದರಿಂದಾಗಿ ಕನ್ನಡ ಸಾಹಿತ್ಯದ ಓದಿನೊಂದಿಗೆ ಅವರಲ್ಲಿ ಭಾವನಾತ್ಮಕ ವಿಕಾಸ ಸಾಧ್ಯವಾಗುತ್ತದೆ.
2. ತಾಂತ್ರಿಕ ಶಿಕ್ಷಣವನ್ನು ಪಡೆದ ಅನೇಕರು ಇಂದು ಸಾಹಿತ್ಯ ಕ್ಷೇತ್ರದಲ್ಲಿ ತಮ್ಮ ಸೃಜನಶೀಲ ಬರವಣಿಗೆಯ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಬೆಳಗುತ್ತಿದ್ದಾರೆ. (ಉದಾಹರಣೆಗೆ ವಸುಧೇಂದ್ರ)
3. ಕನ್ನಡ ಭಾಷೆಗೆ ಸಂಬಂಧಿಸಿದಂತೆ ತಂತ್ರಜ್ಞಾನ ಅಭಿವೃದ್ಧಿಗೆ ಪೂರಕವಾಗಿ ಕನ್ನಡ ಕಲಿತ ಕೆಲವು ತಂತ್ರಜ್ಞರು ಕೆಲಸ ಮಾಡುತ್ತಾರೆ. ಇದರಿಂದಾಗಿ ಕನ್ನಡದಲ್ಲಿ ತಂತ್ರಜ್ಞಾನದ ಅಭಿವೃದ್ಧಿಯಾಗುತ್ತದೆ ಹಾಗೂ ತಂತ್ರಜ್ಞಾನದ ಮೂಲಕ ಕನ್ನಡದ ಅಭಿವೃದ್ಧಿಯೂ ಜೊತೆಜೊತೆಯಲ್ಲಿ ಸಾಗುತ್ತದೆ.
4. ಕನ್ನಡಿಗರಿಗೆ ಇತರ ಭಾಷೆಗಳ ಮೇಲಿನ ಅವಲಂಬನೆ ಕಡಿಮೆ ಮಾಡುವಲ್ಲಿ ಕನ್ನಡ ಭಾಷೆಯಲ್ಲಿ ತಂತ್ರಜ್ಞಾನದ ಅಭಿವೃದ್ಧಿ ಮಹತ್ವಪೂರ್ಣವಾದ ಪಾತ್ರವನ್ನು ನಿರ್ವಹಿಸುತ್ತದೆ. ಅಂತರ್ಜಾಲದಲ್ಲಿ ಕನ್ನಡದ ಬಳಕೆ, ಪ್ರಮುಖ ಸಾಹಿತ್ಯ ಕೃತಿಗಳ ಡಿಜಿಟಲೀಕರಣ, ಸುಲಭದಲ್ಲಿ ಕನ್ನಡದ ಟೈಪಿಂಗ್, ವಾಯ್ಸ್ ಟೈಪಿಂಗ್ ಮೊದಲಾದ ತಂತ್ರಜ್ಞಾನವು ಕನ್ನಡದಲ್ಲಿ ಅಭಿವೃದ್ಧಿಯಾಗುತ್ತಿರುವುದು ಕನ್ನಡ ಭಾಷಾ ಬೆಳವಣಿಗೆ, ಜನಸಾಮಾನ್ಯರಲ್ಲಿ ಪರಿಣಾಮಕಾರಿಯಾಗಿ ಕನ್ನಡದ ಬಳಕೆಯ ದೃಷ್ಟಿಯಿಂದ ಮಹತ್ವಪೂರ್ಣವಾದುದು.

ಸಾವಿರಾರು ವರ್ಷಗಳ ಇತಿಹಾಸವಿರುವ ಕನ್ನಡ ಭಾಷೆ, ಸಾಹಿತ್ಯವು ಇಂಗ್ಲಿಷ್ ಭಾಷೆ ಹಾಗೂ ಇತರ ಭಾಷೆಗಳಿಂದ ತನಗಾಗುವ ಹಾನಿಯನ್ನು ತಪ್ಪಿಸಿಕೊಳ್ಳಬೇಕಾದರೆ ಕನ್ನಡ ನಾಡಿನಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಕನ್ನಡ ಭಾಷೆಯ ಪರಿಣಾಮಕಾರಿಯಾದ ಬಳಕೆಯಾಗಬೇಕು. ಇದಕ್ಕೆ ಪೂರಕವಾಗಿ ಕನ್ನಡ ಭಾಷಿಗರಿಗೆ ಇತರ ಭಾಷೆಗಳ ಮೇಲಿನ ಅನಿವಾರ್ಯತೆಯನ್ನು, ಅವಲಂಬನೆಯನ್ನು ಕಡಿಮೆ ಮಾಡಬೇಕಿದೆ. ಈ ನಿಟ್ಟಿನಲ್ಲಿ ತಾಂತ್ರಿಕ ಶಿಕ್ಷಣದಲ್ಲಿ ಕನ್ನಡ ಬೋಧನೆಯು ಒಂದು ಪರಿಣಾಮಕಾರಿಯಾದ ದಿಟ್ಟ ಹೆಜ್ಜೆಯಾಗಿದೆ.

**ಆಕರ ಗ್ರಂಥಗಳು:**

1. ತಿಮ್ಮೇಶ ಎಲ್. (ಡಾ.) (2020). ಬಳಕೆ ಕನ್ನಡ, ಬೆಳಗಾವಿ: ತಾಂತ್ರಿಕ ವಿಶ್ವವಿದ್ಯಾಲಯ
2. ತಿಮ್ಮೇಶ ಎಲ್. (ಡಾ.) (2020). ಸಾಂಸ್ಕೃತಿಕ ಕನ್ನಡ, ಬೆಳಗಾವಿ: ತಾಂತ್ರಿಕ ವಿಶ್ವವಿದ್ಯಾಲಯ

## ISARA INSTITUTE OF MANAGEMENT & PROFESSIONAL STUDIES




RESEARCH GATEWAY







AROGYAM ONLINE

## PARIVARTAN PSYCHOLOGY CENTER






भारतीय भाषा, शिक्षा, साहित्य एवं शोध

ISSN 2321 – 9726

WWW.BHARTIYASHODH.COM

INTERNATIONAL RESEARCH JOURNAL OF MANAGEMENT SCIENCE & TECHNOLOGY

ISSN – 2250 – 1959 (0) 2348 – 9367 (P)

WWW.IRJMST.COM

INTERNATIONAL RESEARCH JOURNAL OF COMMERCE, ARTS AND SCIENCE

ISSN 2319 – 9202

WWW.CASIRJ.COM

INTERNATIONAL RESEARCH JOURNAL OF MANAGEMENT SOCIOLOGY & HUMANITIES

ISSN 2277 – 9809 (0) 2348 - 9359 (P)

WWW.IRJMSH.COM

INTERNATIONAL RESEARCH JOURNAL OF SCIENCE ENGINEERING AND TECHNOLOGY

ISSN 2454-3195 (online)

WWW.RJSET.COM

INTEGRATED RESEARCH JOURNAL OF MANAGEMENT, SCIENCE AND INNOVATION

ISSN 2582-5445

WWW.IRJMSI.COM

JOURNAL OF LEGAL STUDIES,POLITICS AND ECONOMICS RESEARCH

WWW.JLPER.COM